## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.2168/2025

| | | |
|---|---|---|
| ಸಾಕ್ಷಿದಾರರ ಹೆಸರು | ರಾಘು | ಸಿ.ಡಬ್ಲ್ಯು-2 |
| ತಂದೆಯ ಹೆಸರು | ಕೃಷ್ಣಮೂರ್ತಿ | ಪಿ .ಡಬ್ಲ್ಯೂ-2 |
| ವಯಸ್ಸು | 42 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಕೂಲಿ ಕೆಲಸ | ದಿನಾಂಕಃ |
| ವಾಸಃ | ಗಾಂಧಿ ನಗರ, ಸಾಗರ | 09.06.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 1 ನನ್ನ ಹೆಂಡತಿ. ಚಾ.ಸಾ 3 ಮತ್ತು 4 ಮಕ್ಕಳು. ಚಾ.ಸಾ 5 ರಿಂದ 7 ಗೊತ್ತು. ಆರೋಪಿತರು ನನ್ನ ತಮ್ಮ ಮತ್ತು ನಾದಿನಿ.

**2.** ದಿನಾಂಕ 17.07.2025 ರಂದು ನಮ್ಮ ಮತ್ತು ಆರೋಪಿತರ ನಡುವೆ ಮಕ್ಕಳ ವಿಚಾರದಲ್ಲಿ ಮನಸ್ತಾಪ ಉಂಟಾಯಿತು. ಆಗ ಆರೋಪಿತರಿಗೆ ತಿಳುವಳಿಕೆ ಹೇಳುವಂತೆ ನಾವು ಪೋಲಿಸ್ ಠಾಣೆಗೆ ಹೋಗಿದ್ದು, ಪೋಲಿಸರ ಕೋರಿಕೆಯ ಮೇರೆಗೆ ಅವರು ಸೂಚಿಸಿದಂತೆ ಚಾ.ಸಾ 1 ರವರು ಒಂದು ದಾಖಲೆಗೆ ಸಹಿ ಮಾಡಿ ಕೊಟ್ಟರು. ದಿನಾಂಕ 21.07.2025 ರಂದು ಪೋಲಿಸರು ನಮ್ಮ ಮನೆಯ ಹತ್ತಿರ ಬಂದು 2 ದಾಖಲೆಗಳಿಗೆ ಚಾ.ಸಾ 1 ರವರ ಸಹಿಗಳನ್ನು ಪಡೆದುಕೊಂಡು ಫೋಟೋ ತೆಗೆದುಕೊಂಡು ಹೋದರು. ಉಳಿದ ಯಾವುದೇ ಮಾಹಿತಿ ಈ ಘಟನೆಗೆ ಸಂಬಂಧಪಟ್ಟಂತೆ ನನಗೆ ತಿಳಿದಿರುವುದಿಲ್ಲ. ಆದ್ದರಿಂದ ಈ ಕೇಸನ್ನು ಮುಕ್ತಾಯ ಮಾಡಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**3.** ದಿನಾಂಕ 17.07.2025 ರಂದು ನಮ್ಮ ಮನೆಯ ಮುಂಭಾಗದ ಕಾಲುದಾರಿಯಲ್ಲಿ ರಾತ್ರಿ 09.15 ಗಂಟೆಗೆ ಚಾ.ಸಾ 3 ಮತ್ತು 4 ರವರು ಹೋಗುತ್ತಿದ್ದಾಗ 1ನೇ ಆರೋಪಿತನು ಎಲ್ಲಿಗೆ

ಹೊರಟಿದ್ದೀರಿ ಎಂದು ಮಾತನಾಡಿಸಿದರು ಎಂದರೆ ಸರಿ. ಆಗ ಚಾ.ಸಾ 1 ರವರು ಮಕ್ಕಳೊಂದಿಗೆ ಏನು ಮಾತನಾಡುತ್ತಿದ್ದೀರಿ ಎಂದು ಹೇಳುತ್ತಿದ್ದಂತೆ 2 ನೇ ಆರೋಪಿತಳು ಏಕೆ ಮಾತನಾಡಿಸುತ್ತೀರಾ ಅವರನ್ನು ಎಂದು ಮನೆಯಿಂದ ಹೊರಗಡೆ ಬಂದಿದ್ದು, 1 ಮತ್ತು 2 ನೇ ಆರೋಪಿತರು ನಮ್ಮೊಂದಿಗೆ ಜಗಳ ಮಾಡಿ ನನಗೆ ಮತ್ತು ಚಾ.ಸಾ 1, 3 ಮತ್ತು 4 ರವರಿಗೆ ಅವಾಚ್ಯವಾಗಿ ಬೈದ್ದು ಹಲ್ಲೆ ಮಾಡಿ ಗಾಯ ಪಡಿಸಿದ್ದಲ್ಲದೇ ನಮಗೆ ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ಚಾ.ಸಾ 1 ರವರು ನಿಪಿ–1 ರಂತೆ ನೀಡಿದ ದೂರಿನ ಮೇರೆಗೆ ದಿನಾಂಕ 21.07.2025 ರಂದು ಪೋಲಿಸರು ಘಟನಾ ಸ್ಥಳಕ್ಕೆ ಬಂದು ಚಾ.ಸಾ 6 ಮತ್ತು 7 ರವರ ಸಮಕ್ಷಮ ಚಾ.ಸಾ 1 ರವರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿ, ನಕ್ಷೆ ತಯಾರಿಸಿ, ಫೋಟೋ ತೆಗೆದರು ಎಂದರೆ ಸರಿಯಲ್ಲ. ನಿಪಿ–2 ರ ಕಾಲಕ್ಕೆ ನ್ಯಾಯಾಲಯದ ಮುಂದೆ ನಾನು ಈಗ ನೋಡುತ್ತಿರುವ ಮರದ ರೀಪರ್ ಅನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಈ ಘಟನೆಯ ಕುರಿತು ದಿನಾಂಕ 21.07.2025 ರಂದು ನಾನು ಈಗ ಓದಿ ಹೇಳಿದಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ–7 ಎಂದು ಗುರುತಿಸಲಾಯಿತು.

**4.** ಆರೋಪಿತರು ಈ ಘಟನೆಯ ಕಾಲಕ್ಕೆ ನಮ್ಮ ವಿರುದ್ಧ ಪ್ರತಿದೂರನ್ನು ದಾಖಲು ಮಾಡಿದ್ದಾರೆ ಎಂದರೆ ಸರಿ. ನಾವು ಮತ್ತು ಆರೋಪಿತರು ಸಂಬಂಧಿಕರಾಗಿರುವುದರಿಂದ ಪರಸ್ಪರ ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆದ್ದರಿಂದ ಈ ಪ್ರಕರಣದ ಎಲ್ಲಾ ಮಾಹಿತಿ ನನಗೆ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಎಂ.ಬಿ.ಜಿ ರವರಿಂದಃ–**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.